# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

**ಭಾಗ ೧೮**

## ಮಧ್ಯಪಾಶ್ಚಾತ್ಯ ಅಮೆರಿಕೆಯ ಪ್ರವಾಸ *(ಮುಂದುವರಿದುದು)*



ಸರ್ವಧರ್ಮ ಸಮ್ಮೇಳನವು ಅಮೆರಿಕದ ಕ್ಷಿತಿಜದಲ್ಲಿ ಒಂದು ದೊಡ್ಡ ಬಿರುಗಾಳಿಯನ್ನೇ ಉಂಟುಮಾಡಿತು. ಸ್ವಾಮಿ ವಿವೇಕಾನಂದರು ಅಲ್ಲಿಗೆ ಹೋಗದಿದ್ದರೂ, ಅದು ದೊಡ್ಡ ಪ್ರಭಾವವನ್ನು ಖಂಡಿತವಾಗಿಯೂ ಉಂಟುಮಾಡುತ್ತಿತ್ತು. ಆದರೆ ಸ್ವಾಮೀಜಿಯವರ ಉಪಸ್ಥಿತಿ ಮತ್ತು ಪ್ರಭಾವಶಾಲಿಯಾದ ಭಾಷಣಗಳು ಅಮೆರಿಕೆಯಲ್ಲಿ ಒಂದು ಸ್ಥಾಯಿಯಾದ ಮಹತ್ತಮ ಪರಿಣಾಮವನ್ನೇ ಉಂಟುಮಾಡಿದವು. ಇದರಿಂದಾಗಿ, ಸಂಪ್ರದಾಯಸ್ಥ ಕ್ರೈಸ್ತರು ಮತ್ತೊಮ್ಮೆ ಇಂಥ ಸಮ್ಮೇಳನವು ನಡೆಯದಿರಲಿ ಎಂದು ಭಗವಂತನನ್ನು ಪ್ರಾರ್ಥನೆ ಮಾಡಿದರು. ಅದರಲ್ಲೂ ಸ್ವಾಮಿ ವಿವೇಕಾನಂದರ ಉಜ್ಜ್ವಲ ವಿಚಾರಗಳು ಅವರಲ್ಲಿ ಅಲ್ಲೋಲ ಕಲ್ಲೋಲವನ್ನೇ ಉಂಟುಮಾಡಿದವು.

ಸ್ವಾಮಿ ವಿವೇಕಾನಂದರ ಅಧಿಕೃತ ಜೀವನದಲ್ಲಿ ಹೀಗೆ ಉಲ್ಲೇಖ ಮಾಡಲಾಗಿದೆ: ತಮ್ಮ ಪಯಣದಲ್ಲಿ ಸ್ವಾಮಿ ವಿವೇಕಾನಂದರು ಅಮೆರಿಕೆಯ ಮಧ್ಯಪಾಶ್ಚಾತ್ಯ ಪ್ರದೇಶದ ಎಲ್ಲ ಪ್ರಮುಖ ನಗರಗಳಿಗೂ ಹೋಗಿದ್ದರು. ಇದಲ್ಲದೆ ಈ ಗ್ರಂಥದ ಮೊದಮೊದಲ ಆವೃತ್ತಿಗಳಲ್ಲಿ ಸೈಂಟ್ ಲೂಯಿಸ್ ಮತ್ತು ಮಿಸ್ಸೌರಿ ನಗರಗಳ ಉಲ್ಲೇಖವನ್ನೂ ಮಾಡಲಾಗಿದೆ. ಆದರೆ ಇತ್ತೀಚಿನ ಸಂಶೋಧನೆಯ ಮೂಲಕ ಅವರು ಈ ನಗರಗಳಿಗೆ ಹೋಗಿರಲಿಲ್ಲ. ಇದಲ್ಲದೆ ೧೮೯೩ರಿಂದ ೧೮೯೪ರ ಅವಧಿಯ ಸೈಂಟ್ ಲೂಯಿಸ್ ನಗರದ ಪತ್ರಿಕೆಗಳನ್ನು ಅವಲೋಕನ ಮಾಡಿದಾಗ, ಸ್ವಾಮೀಜಿಯವರು ಅಲ್ಲಿಗೆ ಭೇಟಿಕೊಟ್ಟು, ಭಾಷಣವನ್ನು ನೀಡಿದ ಪ್ರಸ್ತಾಪವನ್ನು ನಾವು ಎಲ್ಲಿಯೂ ಕಾಣುವುದಿಲ್ಲ. ಇದಲ್ಲದೆ, ಆ ನಗರದಲ್ಲಿ ಪ್ರವಚನಗಳು ಏರ್ಪಾಡಾಗುತ್ತಿದ್ದುದೂ ಬಹಳ ಕಡಮೆಯೇ.

ಆದರೆ ಸೈಂಟ್ ಲೂಯಿಸ್ ನಗರದ 'ಸೈಂಟ್ ಲೂಯಿಸ್ ರಿಪಬ್ಲಿಕ್' ಎನ್ನುವ ಪತ್ರಿಕೆಯಲ್ಲಿ 'ನೈತಿಕತೆ ಮತ್ತು ನಡವಳಿಕೆಗಳ ಬಗ್ಗೆ ಭಾನುವಾರದ ಚಿಂತನೆಗಳು' ಎಂಬ ಅಂಕಣವು ಪ್ರಕಟವಾಗುತ್ತಿತ್ತು. ಇದನ್ನು ಅನಾಮಿಕ ಕ್ರೈಸ್ತಪಾದ್ರಿಯೊಬ್ಬರು ಬರೆಯುತ್ತಿದ್ದರು. ಅವರು ಸರ್ವಧರ್ಮ ಸಮ್ಮೇಳನದ ಬಗ್ಗೆ ಮಾಡಿದ ಪ್ರತಿಕ್ರಿಯೆಗಳು ಆಸಕ್ತಿಕರವಾಗಿವೆ. ಸೆಪ್ಟೆಂಬರ್ ೧೦, ೧೮೯೩ರಂದು ಈ ಲೇಖಕರು ಸಮ್ಮೇಳನದ ಬಗ್ಗೆ ಸಹಾನುಭೂತಿಯ ಮಾತುಗಳನ್ನೇ ಬರೆಯುತ್ತಾರೆ. ಧರ್ಮ ಮತ್ತು ನೀತಿಗಳ ವಿಷಯದಲ್ಲಿ ಒಂದು ಸಾಮಾನ್ಯವೇದಿಕೆಯಾಗಿ ಈ ಸಮ್ಮೇಳನವು ಹೊರಹೊಮ್ಮಲಿದೆ ಎಂದು ಭವಿಷ್ಯವನ್ನು ಕೂಡ ನುಡಿಯುತ್ತಾರೆ. ಹಾಗೂ ಈ ಸಮ್ಮೇಳನದ ಮೂಲಕ ಕ್ರೈಸ್ತಧರ್ಮದ ಪರಮೋಚ್ಚಸ್ಥಾನವು ಸಾಬೀತಾಗಲಿದೆ ಎಂದು ಕೂಡ ಹೇಳುತ್ತಾರೆ.

ಆದರೆ ಮುಂದಿನ ಭಾನುವಾರ ನಮ್ಮ ಪ್ರಿಯ ಲೇಖಕರ ಧ್ವನಿ ಬದಲಾಗುತ್ತದೆ. ತರ್ಕಬದ್ಧವೂ ಶಾಂತಿಯುತವೂ ಆಗಿದ್ದ ಅವರ ಬರವಣಿಗೆಯ ಧಾಟಿಯೇ ಬದಲಾಗುತ್ತದೆ. ಕ್ರೈಸ್ತ ಧರ್ಮಕ್ಕಿಂತ ಭಿನ್ನವಾದ ಧರ್ಮಗಳ ಬಗೆಗಿನ ಅವರ ಸಹಾನುಭೂತಿಯು ಮಾಯವಾಗಿಬಿಡುತ್ತದೆ. ಅವರು ಈಗ ಬಹಳವಾಗಿ ಕೋಪಗೊಂಡಿದ್ದಾರೆ. ಅವರು ಎಲ್ಲ ಧರ್ಮಗಳೂ ಸತ್ಯವಾದವು ಎಂಬುದನ್ನು ಅಲ್ಲಗಳೆಯುತ್ತಾರೆ. ಭಾರತದಲ್ಲಿರುವ ಬಹುದೇವತಾ ಪೂಜೆಯನ್ನು ಖಂಡಿಸುತ್ತಾರೆ. ವಿಗ್ರಹಾರಾಧನೆಯನ್ನು ಕಟುವಾಗಿ ಟೀಕಿಸುತ್ತಾರೆ. ಇದಲ್ಲದೆ ಮುಸ್ಲಿಂ ಧರ್ಮವನ್ನೂ ತಿರಸ್ಕರಿಸುತ್ತಾರೆ.

ಇದಲ್ಲದೆ ತಮ್ಮ ಮುಂದಿನ ಭಾನುವಾರದ ಲೇಖನದಲ್ಲಿ ಇದೇ ಅಜ್ಞಾತ ಲೇಖಕರು ಎಲ್ಲ ಪೌರಸ್ತ್ಯ ಧರ್ಮ ಮತ್ತು ಆಧ್ಯಾ

ತ್ಮಿಕ ಚಿಂತನೆಗಳಿಗಿಂತಲೂ ಕ್ರೈಸ್ತಧರ್ಮದ ನಂಬಿಕೆಗಳೇ ವಿಶ್ವಾಸಕ್ಕೆ ಯೋಗ್ಯವಾದುದು ಎಂದು ಹೊಗಳಿಕೊಳ್ಳುತ್ತಾರೆ. ಇದಲ್ಲದೆ, ಅಕ್ಟೋಬರ್ ೧೫, ೧೮೯೩ರ ತಮ್ಮ ಲೇಖನದಲ್ಲಿ ಪೌರಸ್ತ್ಯ ದೇಶಗಳಾದ ಚೀನಾ, ಭಾರತ, ಜಪಾನ್‌ಗಳಲ್ಲಿ ಮಹಿಳೆಯರಿಗೆ ಮನ್ನಣೆ ಸಿಗುತ್ತಿಲ್ಲ ಎಂದು ದೂರುತ್ತಾರೆ.

ಈ ಬಗೆಯ ಧೋರಣೆಯು ಈ ಒಬ್ಬ ಲೇಖಕನಿಗೆ ಮಾತ್ರವೇ ಸೀಮಿತವಾಗಿರಲಿಲ್ಲ. ೧೮೯೦ರ ದಶಕದ ಕ್ರೈಸ್ತ ಮಿಷನರಿಗಳು ಭಾರತದ ಹಿಂದೂ ವಿಧವೆಯರ ಬವಣೆಯನ್ನು ಎತ್ತಿಹಿಡಿಯುವ ಕೆಲಸವನ್ನು ಮಾಡಿದರೆ ಸಾಕಾಗಿತ್ತು. ಇದು ಅಮೆರಿಕೆಯ ಸ್ತ್ರೀಸಮಾಜವನ್ನು ರೊಚ್ಚಿಗೆಬ್ಬಿಸುತ್ತಿತ್ತು. ಹಾಗೆಂದೇ ಸ್ವಾಮಿ ವಿವೇಕಾನಂದರು ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಸರಿಯಾದ ಅರಿವನ್ನು ಮೂಡಿಸಲು ಬಹಳ ಹೆಣಗಾಡಬೇಕಾಯಿತು; ಆ ವಿಷಯದ ಮೇಲೆ ಹಲವು ಪ್ರವಚನಗಳನ್ನು ನೀಡಬೇಕಾಯಿತು; ನೂರಾರು ಪ್ರಶ್ನೆಗಳನ್ನು ಸಭಿಕರಿಂದ ಎದುರಿಸಬೇಕಾಯಿತು.

ಇದಲ್ಲದೆ ಹಿಂದೆ ಉಲ್ಲೇಖಿಸಿದ ಭಾನುವಾರದ ಲೇಖನಗಳ ಸರಣಿಯ ಲೇಖಕರು ಇನ್ನೊಂದು ವಿಚಿತ್ರವಾದ ವಾದವನ್ನು ಮುಂದಿಡುತ್ತಾರೆ. ಪೂರ್ವದೇಶಗಳ ಪ್ರತಿನಿಧಿಗಳು ಪ್ರಕಟಪಡಿಸಿದ ಬೌದ್ಧಿಕ ಪ್ರಖರತೆ ಮತ್ತು ನೈತಿಕ ದೃಢತೆಗಳು ಅವರಿಗೆ ಬಂದದ್ದು ಕ್ರೈಸ್ತಧರ್ಮದ ಸಂಪರ್ಕದಿಂದಲೇ ಎಂದು. ಆದರೆ ಸ್ವಾಮಿ ವಿವೇಕಾನಂದರ ವಿಷಯದಲ್ಲಿ ಈ ಲೇಖಕರು ಗಾಢ ಮೌನವನ್ನು ವಹಿಸುತ್ತಾರೆ.

ಇದಲ್ಲದೆ ಸೈಂಟ್ ಲೂಯಿಸ್ ನಗರದಲ್ಲಿ ಇನ್ನೊಂದು ಆಸಕ್ತಿಕರವಾದ ಘಟನೆ ನಡೆಯಿತು. ರಾಜಕುಮಾರ ವೊಲ್ಕೋನ್ಸ್ಕಿ ಎನ್ನುವವನು ಸರ್ವಧರ್ಮ ಸಮ್ಮೇಳನಕ್ಕೆ ರಷ್ಯಾ ದೇಶದಿಂದ ಬಂದಿದ್ದ ಪ್ರತಿನಿಧಿ. ಆತನು ಸೈಂಟ್ ಲೂಯಿಸ್ ನಗರಕ್ಕೆ ಭೇಟಿ ಕೊಟ್ಟನು. ಅಕ್ಟೋಬರ್ ೩೦, ೧೮೯೩ರಂದು ಅಮೆರಿಕೆಯಲ್ಲಿ ತನ್ನ ಅನುಭವಗಳನ್ನು ಹಂಚಿಕೊಂಡನು. ಆತನು ಸ್ವಾಮಿ ವಿವೇಕಾನಂದರ ಸ್ನೇಹಿತನಾಗಿದ್ದನು; ಅಭಿಮಾನಿಯಾಗಿದ್ದನು. ಅವನ ಮಾತುಗಳನ್ನು ಸೈಂಟ್ ಲೂಯಿಸ್ ರಿಪಬ್ಲಿಕ್ ಪತ್ರಿಕೆಯು ಅಕ್ಟೋಬರ್ ೩೧ರ ತನ್ನ ಸಂಚಿಕೆಯಲ್ಲಿ ಹೀಗೆ ವರದಿಮಾಡಿತು:

''ಯಾವುದೇ ವ್ಯಕ್ತಿಯನ್ನು ; 'ನೀನು ಯಾವ ಮತಕ್ಕೆ ಸೇರಿದವನು?' ಎಂದು ಕೇಳದಿರು. ಇದು ನಿನಗೆ ಮುಖ್ಯವಲ್ಲ; ಇದು ಅವನಿಗೆ ಮಾತ್ರವೇ ಮುಖ್ಯ. ನಮ್ಮ ಮುಂದಿರುವ ಪ್ರಶ್ನೆಯೆಂದರೆ, ಅವನೊಬ್ಬ ಮನುಷ್ಯನೇ ಅಲ್ಲವೇ ಎಂಬುದು. ಅವನನ್ನು ಈ ಮಾಪನದಲ್ಲಿ ಮಾತ್ರವೇ ನಿರ್ಣಯಿಸು. ಸರ್ವಧರ್ಮ ಸಮ್ಮೇಳನದ ಮಹತ್ತಮವಾದ ಮೌಲ್ಯವೆಂದರೆ ಅಲ್ಲಿ ಜನರು ಒಬ್ಬ ಮಾನವನು ಯಾರು ಎಂಬುದನ್ನು ಕಲಿತುಕೊಂಡರು. ಅಲ್ಲಿ ಒಬ್ಬ ವ್ಯಕ್ತಿಯಿದ್ದನು. ಆತನು ಆಧ್ಯಾತ್ಮಿಕತೆಯ ಪ್ರತಿರೂಪವಾಗಿದ್ದನು. ಆತನು ಯಾವ ಧಾರ್ಮಿಕ ಸಂಸ್ಥೆಗೆ ಸೇರಿದವನು ಎನ್ನುವುದು ನನಗೆ ತಿಳಿಯದು. ಆತನು ಒಬ್ಬ ಉತ್ತಮ ಕ್ರೈಸ್ತನಂತೆ ಚಿಂತಿಸುತ್ತಾನೆ; ಮಾತನಾಡುತ್ತಾನೆ. ಆದರೆ ನೀವು ಅವನು ಕ್ರೈಸ್ತನಲ್ಲವೆಂದು ಹೇಳುತ್ತೀರಿ. ಇದೂ ಒಳ್ಳೆಯದೇ. ಅವನು ಬೌದ್ಧಮತದವನೆಂದು ಹೇಳುತ್ತೀರಿ. ಇದಕ್ಕಿಂತ ಒಳ್ಳೆಯದು. ನೀವು ಉತ್ತಮ ಧರ್ಮಕ್ಕೆ ಸೇರಿದವರಾಗಿದ್ದರೆ, ನೀವು ಆತನಿಗಿಂತಲೂ ಉತ್ತಮ ವ್ಯಕ್ತಿಯಾಗಲು ಪ್ರಯತ್ನಿಸಬೇಕು.''

ಭಾಷಣಕಾರನು ಸ್ವಾಮಿ ವಿವೇಕಾನಂದರನ್ನೇ ಉಲ್ಲೇಖಿಸುತ್ತಿದ್ದನು ಎನ್ನುವುದು ಸ್ಪಷ್ಟವಾಗಿದೆ. ಮೇಲಿನ ಭಾಷಣವನ್ನು ಕುರಿತು ಹಿಂದೆ ನಾವು ಚರ್ಚಿಸಿದ ಅಜ್ಞಾತ ಪಾದ್ರಿಯು ಫೆಬ್ರವರಿ ೧೮, ೧೮೯೪ರ ತಮ್ಮ ಭಾನುವಾರದ ಲೇಖನದಲ್ಲಿ ಪ್ರತಿಕ್ರಿಯಿಸಿದರು. ಒಂದೇ ಮಾತಿನಲ್ಲಿ ಭಾಷಣಕಾರನಾದ ವೊಲ್ಕೋನ್ಸ್ಕಿಯನ್ನು ತಿರಸ್ಕರಿಸಿದರು. ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ತಮ್ಮ ಪ್ರಭಾವವನ್ನು ಬೀರಿದ ಸ್ವಾಮಿ ವಿವೇಕಾನಂದರು ಹಾರ್ವರ್ಡ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೆಂಬ ತಪ್ಪು ಮಾಹಿತಿಯನ್ನು ನೀಡಿದರು. ವಿವೇಕಾನಂದರ ಬುದ್ಧಿವಂತಿಕೆಯೆಲ್ಲವೂ ಅವರ ಪಾಶ್ಚಾತ್ಯ ಶಿಕ್ಷಣದಿಂದಲೇ ಬಂದದ್ದು; ಅವರು ತಮ್ಮ ಮೈಬಣ್ಣ ಮತ್ತು ಉಡುಪಿನಲ್ಲಿ ಮಾತ್ರವೇ ಏಷಿಯಾ ಖಂಡದವರು ಎಂದು ಜರಿದರು. ಈ ಧೋರಣೆಯನ್ನು ಕೆಲವು ಕ್ರೈಸ್ತಪಾದ್ರಿಗಳು ಅಮೆರಿಕೆಯಲ್ಲಿ ಆ ಕಾಲದಲ್ಲಿ ಹೊಂದಿದ್ದರು.

ಆದರೆ ಅದೃಷ್ಟವಶಾತ್ ಅಮೆರಿಕೆಯ ಮಧ್ಯಪಾಶ್ಚಾತ್ಯ ಪ್ರದೇಶಗಳಲ್ಲಿ ನೆಲೆಸಿದ್ದ ಎಲ್ಲ ಕ್ರೈಸ್ತ ಮಿಷನರಿಗಳೂ ಕೂಡ ಈ ಅಭಿಪ್ರಾಯದವರಾಗಿರಲಿಲ್ಲ. ಅವರಲ್ಲಿ ಅನೇಕರು ಕ್ರೈಸ್ತ ನಂಬಿಕೆಗಳ ಮರುಪರೀಕ್ಷೆಯಾಗಬೇಕು ಎಂಬ ಅಭಿಪ್ರಾಯದವರಾಗಿದ್ದರು. ಸೈಂಟ್ ಲೂಯಿಸ್ ಡೈಲಿ ಗ್ಲೋಬ್ ಡೆಮೊಕ್ರಾಟ್ ಎಂಬ ಪತ್ರಿಕೆಯು ಈ ಬಗೆಯ ಉದಾರಭಾವನೆಗಳು ಇರುವ ಒಂದು ಲೇಖನವನ್ನು ಅಕ್ಟೋಬರ್ ೨, ೧೮೯೩ರಲ್ಲಿ ಪ್ರಕಟಿಸಿತು.

ಏನೇ ಆಗಲಿ, ಅಮೆರಿಕದ ಚರ್ಚುಗಳಲ್ಲಿ ಸರ್ವಧರ್ಮ ಸಮ್ಮೇಳನವು ಒಂದು ಬಗೆಯ ತಳಮಳವನ್ನೇ ಉಂಟುಮಾಡಿತು ಎನ್ನಬಹುದು. ಇದರಿಂದಾಗಿ, ಅನೇಕ ಕ್ರೈಸ್ತ ಪ್ರವಚನಕಾರರಿಗೆ ತಮ್ಮ ಸಿದ್ಧಾಂತಗಳ ಆಮೂಲಾಗ್ರ ವಿಶ್ಲೇಷಣೆಗೆ ಅವಕಾಶ ಸಿಕ್ಕಿತು. ಇದಲ್ಲದೆ, ಇನ್ನೊಂದು ಮಹತ್ವವಾದ ಘಟನೆಯು ನಡೆಯಿತು. ಜನಗಳ ಮಧ್ಯದಲ್ಲಿ ಒಂದು ರೀತಿಯ ಆಧ್ಯಾತ್ಮಿಕ ಜಾಗೃತಿಯು ಉಂಟಾಯಿತು. ಚರ್ಚುಗಳಲ್ಲಿನ ಪ್ರಾರ್ಥನಾ ಸಭೆಗಳಲ್ಲಿ ಜನರು ಕಿಕ್ಕಿರಿದು ಸೇರಲಾರಂಭಿಸಿದರು. ಪಾದ್ರಿಗಳು ದಿನಕ್ಕೆ ಎರಡು ಅಥವಾ ಮೂರು ಸಲ ಪ್ರಾರ್ಥನಾಸಭೆಗಳನ್ನು ನಡೆಸಲಾರಂಭಿಸಿದರು. ವಿಶೇಷವಾಗಿ ನ್ಯೂಯಾರ್ಕ್ ಮತ್ತು ಬ್ರೂಕ್ಲಿನ್ ಪ್ರದೇಶಗಳಲ್ಲಿ ಧಾರ್ಮಿಕ ಅಲೆಯ ಅಬ್ಬರವು ಹೆಚ್ಚಾಗಿಯೇ ಇತ್ತು. ಕ್ರೈಸ್ತಧರ್ಮಕ್ಕೆ ಒಂದು ಸುಗ್ಗಿಯ ಕಾಲ ಎಂದು ಪತ್ರಿಕೆಗಳು ವರ್ಣಿಸಲು ಆರಂಭಿಸಿದವು.

ಈ ಅದ್ಭುತ ಬೆಳವಣಿಯ ಕಾರಣವನ್ನು ವಿವರಿಸುವುದು ಇತಿಹಾಸಕಾರರಿಗೆ ಮತ್ತು ಮನೋವಿಜ್ಞಾನಿಗಳಿಗೆ ಕಷ್ಟವೇ ಆಗಿತ್ತು. ಪ್ರಾಯಶಃ ಇಂಥ ಒಂದು ಹಠಾತ್ತನೆಯ ವಿದ್ಯಮಾನಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಒಂದು ಆ ಕಾಲವು ಆರ್ಥಿಕ ಹಿಂಜರಿತದ ಕಾಲವಾಗಿತ್ತು. ಎರಡನೆಯದಾಗಿ, ಸಾಮಾನ್ಯ ಜನರನ್ನು ಕ್ರೈಸ್ತಪಾದ್ರಿಗಳು ಅನುಕಂಪದಿಂದ ನೋಡಲು ಆರಂಭಿಸಿದರು. ಹಿಂದೆ ಮಾಡುತ್ತಿದ್ದಂತೆ ನರಕದ ಭಯವನ್ನು ತೋರಿಸಿ, ಹೆದರಿಸುತ್ತಿರಲಿಲ್ಲ. ಇದರಿಂದಾಗಿ ಅಮೆರಿಕೆಯಲ್ಲಿ ಹಠಾತ್ತನೆ ಆಧ್ಯಾತ್ಮಿಕ ಶಕ್ತಿಯ ಜಾಗೃತಿ ಉಂಟಾಯಿತು. ಇನ್ನೊಂದು ಅಂಶವೆಂದರೆ ೧೮೯೩ನೆಯ ವರ್ಷವು ಅಮೆರಿಕೆಯಲ್ಲಿ ಆನಂದ ಮತ್ತು ಉತ್ಸಾಹದ ಕಾಲಾವಧಿಯಾಗಿತ್ತು. ಕ್ರೈಸ್ತಪಾದ್ರಿಗಳು ಭಗವಂತನ ವೈಭವ ಮತ್ತು ಅಪಾರ ಕರುಣೆಗಳಿಗೆ ಮಹತ್ವವನ್ನು ನೀಡಿದರು. ಅವರೊಡನೆ ಸೇರಿಕೊಂಡು, ಅಮೆರಿಕದ ಶ್ರದ್ಧಾಳು ಜನಗಳು ಎಲ್ಲೆಲ್ಲೂ ಪ್ರಾರ್ಥನಾಗೀತೆಗಳನ್ನು ಹಾಡುತ್ತಿದ್ದರು.

ಕ್ರೈಸ್ತಪ್ರಾರ್ಥನಾ ಮಂದಿರಗಳಲ್ಲಿ ಉಂಟಾಗುತ್ತಿದ್ದ ಈ ಅಗಾಧ ಪರಿವರ್ತನೆಯು ಎಲ್ಲ ಕಡೆ ಕಾಣಬರುತ್ತಿದ್ದುದು ಸರಿಯೇ. ಆದರೆ ವಿಶ್ವಪ್ರವಾದಿಯಾದ ಸ್ವಾಮಿ ವಿವೇಕಾನಂದರು ಅಮೆರಿಕದ ಅಂತರಂಗದಲ್ಲಿ ಸುಪ್ತವಾಗಿದ್ದ ಆಧ್ಯಾತ್ಮಿಕ ಚೇತನವನ್ನು ಬಡಿದೆಬ್ಬಿಸಿದರು. ಹೀಗಾಗಿ ಎಲ್ಲೆಲ್ಲಿಯೂ ಜನರಲ್ಲಿ ಆಧ್ಯಾತ್ಮಿಕ ತವಕ ಕಾಣಬರುತ್ತಿತ್ತು. ಹೀಗಾಗಿ ತಮ್ಮ ಹೃದಯಕ್ಕೆ ಹತ್ತಿರವಾದ ಧರ್ಮದ ಕೇಂದ್ರಗಳಿಗೆ ಅವರೆಲ್ಲರೂ ಧಾವಿಸಲಾರಂಭಿಸಿದರು.

ಸ್ವಾಮಿ ವಿವೇಕಾನಂದರ ಕೀರ್ತಿಯು ಕಾಡಿನ ಬೆಂಕಿಯಂತೆ ಎಲ್ಲೆಡೆ ಹರಡಿತು. ಸ್ವಾಮಿ ಅಭೇದಾನಂದರು ಇದರ ಪ್ರತ್ಯಕ್ಷ ದರ್ಶಿಯಾಗಿದ್ದರು. ಅವರು ತಾವು ನ್ಯೂಯಾರ್ಕ್ ನಗರದ ವೇದಾಂತ ಸೊಸೈಟಿಯಲ್ಲಿ ಮಾರ್ಚ್ ೮, ೧೯೦೩ರಂದು ನೀಡಿದ ಪ್ರವಚನದಲ್ಲಿ ಹೀಗೆ ಹೇಳುತ್ತಾರೆ: ''ಕಳೆದ ದಶಕದಲ್ಲಿ ಅಮೆರಿಕೆಯ ಚರ್ಚುಗಳಲ್ಲಿ ವಿಶ್ವವಿಖ್ಯಾತ ಸ್ವಾಮಿ ವಿವೇಕಾನಂದರ ಬೋಧನೆಗಳ ಪರವಾಗಿಯೋ ಅಥವಾ ವಿರುದ್ಧವಾಗಿಯೋ ಮಾತನಾಡದವರು ಯಾರೂ ಇಲ್ಲ.'' ಸ್ವಾಮಿ ವಿವೇಕಾನಂದರ ಸಂದೇಶವು ದೂರದೂರಕ್ಕೆ ಹಬ್ಬಿತ್ತು. ಅವರ ಅಪೂರ್ವ ಆಧ್ಯಾತ್ಮಿಕ ಶಕ್ತಿಯು ನೀರವವಾಗಿ ಕಾರ್ಯವೆಸಗುತ್ತಿತ್ತು. ಅಮೆರಿಕದ ಜನತೆಯಲ್ಲಿ ಆಧ್ಯಾತ್ಮಿಕ ತರಂಗಗಳನ್ನು ಎಬ್ಬಿಸಿತ್ತು. *(ಸಮಾಪ್ತಿ)*

**ಸುದ್ದಿ ಸಂಚಯ**

# ಮೈಸೂರು ಶ್ರೀರಾಮಕೃಷ್ಣ ಆಶ್ರಮಕ್ಕೆ 'ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿ'

೨೦೨೨ನೇ ಸಾಲಿನ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಮೈಸೂರು ಶ್ರೀರಾಮಕೃಷ್ಣ ಆಶ್ರಮಕ್ಕೆ **'ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿ'**ಯನ್ನು ನೀಡಿ ಗೌರವಿಸಿದೆ. ಮೌಲ್ಯಾಧಾರಿತ ಶಿಕ್ಷಣ, ಅಧ್ಯಾತ್ಮ, ಸಂಸ್ಕೃತಿ ಹಾಗೂ ಸಮಾಜಸೇವೆ — ಮೊದಲಾದ ಕ್ಷೇತ್ರಗಳಲ್ಲಿ ಗಮನಾರ್ಹ ಸೇವೆ ಸಲ್ಲಿಸುತ್ತ ಬಂದಿರುವ ಆಶ್ರಮಕ್ಕೆ ಈ ಬಾರಿಯ ಅಮೃತ ಮಹೋತ್ಸವ ರಾಜ್ಯಪ್ರಶಸ್ತಿ ಲಭಿಸಿರುವುದು ಸಂಸ್ಥೆಯ ಅವಿಶ್ರಾಂತ ದುಡಿಮೆ, ಶ್ರಮ ಹಾಗೂ ಸಾಧನೆಗೆ ಸಂದ ಗೌರವವಾಗಿದೆ.



ನವೆಂಬರ್ ೧ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆಯೋಜಿಸಿದ್ದ ೬೭ನೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅವರು ಪ್ರಶಸ್ತಿಯನ್ನು ಕರ್ನಾಟಕ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿಯವರಿಂದ ಸ್ವೀಕರಿಸಿದರು.

೬೭ನೇ ರಾಜ್ಯೋತ್ಸವದ ಸಂಭ್ರಮದಲ್ಲಿ ನಾಡಿನ ೬೭ ಮಂದಿ ಸಾಧಕರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಹಾಗೂ ಅಮೃತ ಮಹೋತ್ಸವದ ಆಚರಣೆಯ ನಿಮಿತ್ತ ೧೦ ಸಂಸ್ಥೆಗಳನ್ನು ಅಮೃತ ಮಹೋತ್ಸವ ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಆಶ್ರಮದ ಶತಮಾನೋತ್ಸವ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಈ ಪ್ರಶಸ್ತಿ ಲಭಿಸಿದೆ.